

ತಂದೆಯೊಂದಿಗೆ ಮೈಸೂರು ನಾಗರಾಜ್, ಮೈಸೂರು ಮಂಜುನಾಥ್ ಸಹೋದರರು

ನಾವಿಬ್ಬರೂ ಸಂಗೀತ ಎಂಬ ಕಂಠೀಹಾರ ರೂಪಿಸುತ್ತಿದ್ದೇವೆ. ಅದಕ್ಕೆ ಮಂಜು ಹವಳ ಪೋಣಿಸಿದರೆ, ನಾನು ಮುತ್ತು ಪೋಣಿಸುತ್ತೇನೆ. ಒಬ್ಬರು ಇನ್ನೊಬ್ಬರ ಬೆನ್ನು ತಟ್ಟಿಕೊಂಡೇ ಈ ಕೆಲಸ ಮಾಡ್ತೀವಿ. ಯಾರು ಚೆನ್ನಾಗಿ ಈ ಕೆಲಸ ಮಾಡಿದರೂ ಹೆಸರು, ಶ್ರೇಯಸ್ಸು ಇಬ್ಬರಿಗೂ ಅನ್ನೋದು ಗೊತ್ತಿದೆ. ಮೂಲ ಉದ್ದೇಶ ಕಛೇರಿ ಚೆನ್ನಾಗಿ ಮೂಡಿ ಬರಬೇಕು ಅನ್ನೋದು. ಇದಕ್ಕಾಗಿ, ನಮ್ಮೊಳಗಿರುವ ಸಂಗೀತವನ್ನು ಎರೆಯುತ್ತಿರುತ್ತೇವೆ. ಹಾಗಾಗಿ, ನನಗೆ ಹೆಚ್ಚು, ಅವನಿಗೆ ಕಡಿಮೆ ತಿಳಿದಿದೆ ಅನ್ನೋ ಮನೋಭಾವ ಇಬ್ಬರಲ್ಲೂ ಮೂಡಲ್ಲ.

◆ ವೇದಿಕೆ ಮೇಲೆ ಮಾತಿಲ್ಲದೆ ನಿಮ್ಮ ಹೊಂದಾಣಿಕೆ ಹೇಗೆ ಆಗುತ್ತೆ?

ಕಛೇರಿಯಲ್ಲಿ ಕಲಾವಿದರ ಮೂಡ್ (ಲಹರಿ) ಮುಖ್ಯ. ವಯೊಲಿನ್ ಹಿಡಿದು ಕೂತಾಗಲೇ ಇವೆಲ್ಲ ಶುರುವಾಗೋದು. ಎಷ್ಟೋ ಸಲ, ಯಾವುದೋ ರಾಗ ಮನಸ್ಸಿಗೆ ಹೊಳೆದು, ತಂತಿಯ ಮೇಲೆ ಬಂದು, ಮಂಜುನಾಥ್ ಅದರಲ್ಲಿ ಅದ್ಭುತವಾದ ಸ್ಥಿತಿಗೆ ತಲುಪಿ, ಆನಂದವಾಗಿ ನುಡಿಸುತ್ತಿದ್ದಾನೆ ಅಂತಿಟ್ಟುಕೊಳ್ಳಿ, ನಾನು ಅಡ್ಡ ಹೋಗಲ್ಲ. ಮುಂದುವರಿಸು ಅಂತೀನಿ. ಹಾಗೇನೇ, ನಾನು ರಾಗೋನ್ಮಾದದಲ್ಲಿದ್ದರೆ ಮಂಜು ಹಾಗೇ ಮಾಡ್ತಾನೆ. ಇಬ್ಬರಲ್ಲಿ ಯಾರೊಬ್ಬರೂ ಇಂಥ ಸಮಾಧಿ ಸ್ಥಿತಿಗೆ ತಲುಪಬಹುದು ಅನ್ನೋದು ನಮಗೆ ಗೊತ್ತಿರುವ ಸತ್ಯ.

◆ ನುಡಿಸಾಣಿಕೆ ಹೇಗೆ ಹಂಚಿಕೊಳ್ತೀರಿ?

ಕೃತಿಗಳನ್ನು ಇಬ್ಬರೂ ನುಡಿಸುತ್ತೇವೆ. ಕೃತಿಗೂ ಮೊದಲು ಶುರುವಾಗುವ ಮನೋಧರ್ಮ ಸಂಗೀತದಲ್ಲಿ ನಮ್ಮ ಕೈಚಳಕ ತೋರಿಸುತ್ತೇವೆ. ರಾಗಾಲಾಪನೆಯಲ್ಲಿ ರಾಗದ ವಿವಿಧ ಮಜಲುಗಳನ್ನು ಬಿಚ್ಚಿಡುತ್ತೇವೆ. ಅದಾದ ಮೇಲೆ ಬ್ರೋಚೇವಾರೆ ವರುರಾದಂಥ ಕೃತಿಯನ್ನು ಇಬ್ಬರೂ ನುಡಿಸುತ್ತೇವೆ. ನುಡಿಸೋದು ಅಂದರೆ, ಅಂದಿನ ಶ್ರೋತೃಗಳ ಮೂಡು, ಅಗತ್ಯಕ್ಕೆ ತಕ್ಕಂತೆ ಮೇಲಿನ, ಕೆಳ ಸ್ಥಾಯಿಯನ್ನು ಪಠಿಸುತ್ತಾ, ಒಬ್ಬರಿಗೊಬ್ಬರು ಹೆಗಲು ಕೊಟ್ಟು ನುಡಿಸುತ್ತಿರುತ್ತೇವೆ. ನಂತರದ ಸ್ವರ ಕಲ್ಪನೆಯಲ್ಲಿ ಇಬ್ಬರೂ ನಮ್ಮ ನೈಪುಣ್ಯವನ್ನು ಪ್ರದರ್ಶಿಸುತ್ತೇವೆ. ರಾಗಾಲಾಪನೆ, ಸ್ವರಕಲ್ಪನೆ, ಸಾಹಿತ್ಯ ಭಾಗವನ್ನು ವಿಸ್ತರಿಸುವ ನೆರವಲ್, ರಾಗಂ ತಾನಂ ಪಲ್ಲವಿ ಹೀಗೆ, ಕರ್ನಾಟಕ ಸಂಗೀತದಲ್ಲಿ ಜ್ಞಾನ ಪ್ರದರ್ಶನಕ್ಕೆ 810 ವೆರೈಟಿ ಇದೆ.

◆ ಕಲಾವಿದರು ಮನಃಶಾಸ್ತ್ರಜ್ಞರೂ ಹೌದೇ?

ಖಂಡಿತ, ನಾವು ಒಬ್ಬರಿಗೊಬ್ಬರ ಮನಸ್ಸಗಳನ್ನು ಓದಿಕೊಳ್ಳುತ್ತಲೇ ಇರುತ್ತೇವೆ. ಎಷ್ಟೋ ಸಲ, ನಾನು ನುಡಿಸಿದ ರಾಗ–ಕೃತಿಯ ಆಧಾರದ ಮೇಲೆ ಮಂಜು ಮುಂದಿನ ರಾಗವನ್ನು ಆಯ್ಕೆ ಮಾಡ್ತಾನೆ; ಮಾತಿಲ್ಲದೆ. ಅವನು ಏನು ನುಡಿಸ್ತಾನೆ ಅಂತ ನನಗೆ ಗೊತ್ತಾಗುವುದರಿಂದ, ಕೃತಿ ಆಯ್ಕೆಗಳಲ್ಲಿ ಗೊಂದಲ ಉಂಟಾಗಲ್ಲ.

ಸಾಂಪ್ರದಾಯಿಕ ಸಂಗೀತ ಇಷ್ಟ ಪಡುವ ಶ್ರೋತೃಗಳು ಎದುರಿಗಿದ್ದರೆ ಅವರಿಗೆ ಪ್ರಿಯವಾದ ತೋಡಿಯಂಥ ಘನರಾಗಗಳಿಂದ ಕಛೇರಿ ಮಾಡ್ತೀವಿ. ಈ ಯೋಚನೆ ಯಾರಿಗೆ ಹೊಳೆಯುತ್ತೋ ಅವರೇ ಮೊದಲು ಶುರು ಮಾಡುತ್ತಾರೆ. ಮಂಜುನಾಥ್ ಮೊದಲ ಕೀರ್ತನೆ ಇದು ಅಂತ ಸಲಹೆ ಕೊಟ್ಟಿದ್ದರೆ, ಎರಡನೆ ಕೃತಿ ನನ್ನದಾಗಿರುತ್ತದೆ. ಅವನು ಶುದ್ಧ ಮಧ್ಯಮದಲ್ಲಿ ಮುಂದುವರೆದರೆ, ಮುಂದಿನ ರಾಗದಲ್ಲಿ ಪ್ರತಿ ಮಧ್ಯಮವನ್ನು ನಾನು ಕೊಡ್ತೀನಿ. ಹೀಗೆ, ನಾವಿಬ್ಬರೂ ವೇದಿಕೆಯಲ್ಲಿ ಒಬ್ಬರಿಗೊಬ್ಬರು ಕೈ ಹಿಡಿದು ಓಡಾಡುತ್ತಿರುತ್ತೇವೆ.

◆ ನಮ್ಮತನ ತೋರಿಸೋಕೆ ವಯೊಲಿನ್ ಯುಗಳ ಲಿಮಿಟೇಷನ್ ಅನಿಸೊಲ್ವಾ?

ಪರಸ್ಪರ ಹೊಟ್ಟೆಕಿಚ್ಚು ಉಂಟಾದರೆ ಹೀಗನಿಸುತ್ತದೆ. ನಮ್ಮಲ್ಲಿ ಅದಿಲ್ಲವೇ ಇಲ್ಲ. ಕಛೇರಿಯಲ್ಲಿ ಪೂರ್ಣ ಮಿಂಚುವುದಕ್ಕೆ ಯಾರು ಯಾರಿಗೂ ಅಡ್ಡಿಯಾಗೊಲ್ಲ. ಬದಲಿಗೆ, ಒಬ್ಬರಿಗೊಬ್ಬರು ಎಂಜಾಯ್ ಮಾಡುತ್ತಿರುತ್ತೇವೆ. ಹೀಗಾಗಿ, ಡುಯೆಟ್ ನಮ್ಮ ಪಾಲಿಗೆ ಲಿಮಿಟೇಷನ್ ಆಗೇ ಇಲ್ಲ.

◆ ನೀವು ಮೂರು ಜನರೇಷನ್ ಗೆ ನುಡಿಸಿದ್ದೀರಿ. ನಿಮ್ಮ ಮಗ ವಿದ್ವಾನ್ ಕಾರ್ತಿಕ್ ಜೊತೆ ನುಡಿಸುವಾಗ ಹೊಂದಾಣಿಕೆ ಹೇಗಿರುತ್ತದೆ?

ವಯಸ್ಸು ಮುಖ್ಯ ಆಗೋಲ್ಲ. ನಮ್ಮತಂದೆಯಿಂದ ಬಂದ ಕಛೇರಿ ತಂತ್ರಗಳು, ಹೊಂದಾಣಿಕೆ, ಶೈಲಿ ರೂಢಿಸಿಕೊಳ್ಳುವ ಶಕ್ತಿ ಎಲ್ಲವನ್ನೂ ಹಾಗೇ ನಮ್ಮ ಮಕ್ಕಳಿಗೂ ದಾಟಿಸಿರುತ್ತೇವೆ. ನಮ್ಮಲ್ಲಿ ಒಂದು ನಿಯಮ ಇದೆ. ನಾನು, ನನ್ನ ತಂದೆ ಪ್ರಾಕ್ಟೀಸ್ ಮಾಡುತ್ತಿದ್ದರೆ, ಮಂಜುನಾಥ್ ಕೇಳಿಸಿಕೊಳ್ಳಲು ನಮ್ಮ ಎದುರು ಕುಳಿತುಕೊಂಡಿರೋನು. ಅದೇ ರೀತಿ, ಮಂಜುನಾಥ್, ನಾನು ನುಡಿಸುತ್ತಿದ್ದರೆ, ನನ್ನ ಮಗ, ಅವನ ಮಗ ಇಬ್ಬರೂ ಕೇಳುತ್ತಿರಬೇಕು. ಕೇಳ್ಕೆಯಿಂದ ಕಛೇರಿ ಮಾಡುವ ಶಕ್ತಿ, ಶೈಲಿ ರೂಪುಗೊಳ್ಳುತ್ತೆ. ಹೀಗಾಗಿ, ಅವರುಗಳ ಮನಸ್ಸನ್ನು ಬೇಗ ರೀಡ್ ಮಾಡಬಹುದು.

◆ ಕಾಲಕ್ಕೆ ತಕ್ಕಂತೆ ನಿಮ್ಮಲ್ಲಿ ಪರಿಷ್ಕರಣೆ ನಡೆಯುತ್ತದಾ?

ಖಂಡಿತ. ನಮ್ಮ ವಾದನ ಶೈಲಿ ಪರಿಷ್ಕರಣೆ ಆಗುತ್ತಲೇ ಇರಬೇಕು. ಕೇಳುಗರ ಅಭಿರುಚಿ ತತ್‌ಕ್ಷಣ ಬದಲಾಗೊಲ್ಲ. ಚೂರು ಚೂರೇ ಬದಲಾಗುತ್ತದೆ. ಅವರ ಜೊತೆ ನಾವು ಅಪ್‌ಡೇಟ್ ಆಗಬೇಕು. ಪ್ರತಿ ಕಛೇರಿಯೂ ನಮ್ಮನ್ನು ಅಪ್‌ಡೇಟ್ ಮಾಡುವ ಸಾಫ್ಟ್‌ವೇರ್ ಇದ್ದಹಾಗೆ.

◆ ನಿಮ್ಮ ಸಂಗೀತ ಜ್ಞಾನ ಕೇವಲ ನಿಮ್ಮ ಕುಟುಂಬಕ್ಕೆ ಮಾತ್ರವಾ?

ಇಲ್ಲ, ಸಂಗೀತ ಯಾವತ್ತೂ ನಿಸ್ವಾರ್ಥವಾಗಿ ಹರಿಯಬೇಕು ಅನ್ನೋದು ನನ್ನ ಬಯಕೆ. ನಮ್ಮ ಕಲಿಕೆ, ಯೋಚನೆ, ವಿಶೇಷಣ, ಶಕ್ತಿಯನ್ನು ಮುಂದಿನ ಪೀಳಿಗೆಗೆ ಧಾರೆ ಎರೆಯಬೇಕು ಅನ್ನೋ ಸಂಕಲ್ಪ ಮಾಡಿದ್ದೇನೆ. ಹೀಗಾಗಿ, ನನ್ನ ಮಹತ್ವದ ಆಕಾಂಕ್ಷೆ ಸಂಗೀತ ದಾಸೋಹ ಮಾಡೋದು, ಅದಕ್ಕಾಗಿ ಶಾಲೆ ಆರಂಭಿಸುವುದು. ಅನೇಕರು ನನ್ನಲ್ಲಿ ಶಿಷ್ಯತ್ವ ಬೇಕು ಅಂತಿದ್ದಾರೆ. ನಮಗಿರುವ ಕಾರ್ಯಕ್ರಮದ ಒತ್ತಡದಿಂದ ಅದು ಈ ತನಕ ಸಾಧ್ಯವಾಗಿರಲಿಲ್ಲ. ಇನ್ನುಮುಂದೆ ಸಾಧ್ಯ ಮಾಡುತ್ತೇನೆ.

ಪ್ರತಿಕ್ರಿಯಿಸಿ: feedback@sudha.co.in